# ಮರಳಿ ಬಂದ ಸಂಗೀತಾ

'ಮೀ ಟೂ' ಪ್ರಕರಣದ ನಂತರ ಚಿತ್ರರಂಗದಿಂದ ದೂರವಾಗಿದ್ದ ಸಂಗೀತಾ ಭಟ್ ಈಗ ಮತ್ತೆ ಬಣ್ಣದ ಬದುಕಿಗೆ ಮರಳಿದ್ದಾರೆ.

■ ಪದ್ಮನಾಭ ಭಟ್



ಸಂಗೀತಾ ಭಟ್ ಚಿತ್ರರಂಗಕ್ಕೆ ಮರಳಿ ಬಂದಿದ್ದಾರೆ. ನಟಿಯರು ಇದ್ದಕ್ಕಿದ್ದಂತೆಯೇ ಚಿತ್ರರಂಗದಿಂದ ಕಾಣೆಯಾಗಿಬಿಡುವುದು. ಮತ್ತೆ ಕೆಲವು ಕಾಲದ ನಂತರ ಹೊಸ ವೇಷ–ಪಾತ್ರಗಳೊಂದಿಗೆ ಮರಳಿ ಬರುವುದು ಚಿತ್ರರಂಗದಲ್ಲಿ ವಿರಳವಾಗಿಯಾದರೂ ನಡೆಯುತ್ತಿರುತ್ತದೆ. ಆದರೆ ಸಂಗೀತಾ ಭಟ್ ಮರಳಿದ್ದಕ್ಕೆ ಅವುಗಳಿಗಿಂತ ವಿಶೇಷವಾದ ಮಹತ್ವವಿದೆ. ಯಾಕೆಂದರೆ ಸಂಗೀತಾ ಚಿತ್ರರಂಗ ಬಿಟ್ಟಿದ್ದು ದೊಡ್ಡ ವಿವಾದದ ನಂತರ. 'ಮೀ ಟೂ' ಚಳವಳಿಯ ಸಂದರ್ಭದಲ್ಲಿ ಅವರು ಚಿತ್ರರಂಗದ ಕೆಲವು ನಟರು, ನಿರ್ದೇಶಕರ ಕುರಿತು ಹೆಸರು ಹೇಳದೇ ಆಡಿದ ಮಾತು ಅವರನ್ನು ಚಿತ್ರರಂಗದ ಕೆಂಡಗಣ್ಣಿನ ದೃಷ್ಟಿಯಲ್ಲಿ ಬೇಯುವ ಹಾಗೆ ಮಾಡಿತ್ತು. ಅಷ್ಟೇ ಅಲ್ಲ, ಅವರ ವೃತ್ತಿಬದುಕು ಅಲ್ಲಿಗೆ ಮುಗಿದೇ ಹೋಯಿತು ಎಂಬ ಮಾತುಗಳು ದಟ್ಟವಾಗಿಯೇ ಕೇಳಿಸಿದ್ದವು. ಬಹುಶಃ ಸಂಗೀತಾ ಅವರಿಗೂ ಹಾಗೆಯೇ ಅನಿಸಿರಲಿಕ್ಕೆ ಸಾಕು. ಆದರೆ ಆ ಅನಿಸಿಕೆ ಸುಳ್ಳಾಗಿದೆ ಮತ್ತು ಸಂಗೀತಾ ಮತ್ತೆ ಬಣ್ಣ ಹಚ್ಚುತ್ತಿದ್ದಾರೆ.

ಪುರುಷರ ಚಕ್ರಾಧಿಪತ್ಯ ಇರುವ ಚಿತ್ರರಂಗದಲ್ಲಿ ನಟಿಯರನ್ನು ಕಾಲಕಸದ ಹಾಗೆಯೇ ನೋಡುವವರೇ ಬಹುಪಾಲು. ಹಾಗಾಗಿಯೇ ನಟಿಯರು ತಮ್ಮ ಮೇಲೆ ನಡೆದ ದೌರ್ಜನ್ಯದ ಕುರಿತು ತುಟಿಬಿಚ್ಚತೊಡಗಿದಾಗ ಇಡೀ ಚಿತ್ರರಂಗವೇ ಕಸವನ್ನು ಹೊಸಕಿ ಹಾಕುವ ಹಾಗೆ ಹೊಸಕಿ ಹಾಕಲು ಮುಗಿಬಿದ್ದಿತ್ತು. ಅವರು ಮತ್ತೆ ಮೇಲೇಳಲು ಸಾಧ್ಯವೇ ಇಲ್ಲ ಎನ್ನುವ ಹಾಗೆ ತಮ್ಮ ಅಭಿಮಾನಿ ಬಳಗದ ಜೊತೆಗೆ ಸೇರಿಕೊಂಡು ಮಾನಸಿಕವಾಗಿ ದಾಳಿ ಮಾಡಿತ್ತು. ಮಹಾ ಬುದ್ಧಿವಂತರ ಹಾಗೆ ನಟಿಸುವ ನಿರ್ದೇಶಕರೊಬ್ಬರಂತೂ ಸಂಗೀತಾ ಅವರನ್ನು 'ಚಿತ್ರರಂಗವೆಂಬ ದೇಹದಿಂದ ಹೊರಗೆ ಹೋಗಲೇಬೇಕಾದ ತ್ಯಾಜ್ಯ' ಎಂದು ಹೇಳಿದ್ದರು. ಆದರೆ ಆಗ ದಾಳಿಗೆ ಒಳಗಾದ ಇಬ್ಬರು ನಟಿಯರೂ ಈಗ ಚಿತ್ರರಂಗಕ್ಕೆ ಮರಳಿದ್ದಾರೆ. 'ಎಲ್ಲವೂ ಮುಗಿದಿಲ್ಲ' ಎಂದು ಹೇಳುತ್ತಿದ್ದಾರೆ.

'ಮೀ ಟೂ' ಪ್ರಕರಣದ ನಂತರ ಚಿತ್ರರಂಗದಿಂದ ದೂರವಾಗಿದ್ದ ಶ್ರುತಿ ಹರಿಹರನ್ ಕೂಡ ಸಿನಿಮಾವೊಂದರ ಮುಖ್ಯ ಪಾತ್ರದಲ್ಲಿ ನಟಿಸುತ್ತಿದ್ದಾರೆ. ಹಾಗೆಯೇ ಖಾಸಗಿ ವಾಹಿನಿಯೊಂದರ ರಿಯಾಲಿಟಿ ಷೋದ ಅತಿಥಿಯಾಗಿಯೂ ಅವರು ಪಾಲ್ಗೊಂಡಿದ್ದರು. ಈಗ ಸಂಗೀತಾ ಭಟ್ ಕೂಡ 'ರೂಪಾಂತರ' ಎಂಬ ಸಿನಿಮಾದಲ್ಲಿ ನಾಯಕಿಯಾಗಿ ನಟಿಸುತ್ತಿದ್ದಾರೆ. ಇಷ್ಟರಲ್ಲಿಯೇ ಅವರಿಗೆ ಇನ್ನೂ ಎರಡು ಸಿನಿಮಾಗಳಲ್ಲಿ ನಟಿಸುವ ಅವಕಾಶ ಕೂಡ ಬಂದಿದೆಯಂತೆ.

ಹೀಗೆಯೇ ಮಲಯಾಳಂ ಸ್ಟಾರ್ ನಟರೊಬ್ಬರ ಮೇಲೆ ಲೈಂಗಿಕ ದೌರ್ಜನ್ಯವೆಸಗಿದ್ದ ಭಾವನಾ, ಆ ಚಿತ್ರರಂಗದಿಂದ ದೂರವಾಗಿದ್ದರು. ಇತ್ತೀಚೆಗೆ ಅವರೂ ಮಲಯಾಳಂ ಸಿನಿಮಾವೊಂದರಲ್ಲಿ ನಟಿಸುತ್ತಿರುವುದು ಸುದ್ದಿಯಾಗಿದೆ. ಇವೆಲ್ಲವೂ ಬರೀ ಸುದ್ದಿಗಳಷ್ಟೇ ಖಂಡಿತ ಅಲ್ಲ, ಭರವಸೆಯ ಕಿರಣಗಳೂ ಹೌದು. ಸತ್ಯವನ್ನು ಹೇಳಿ, ತನ್ನ ಮೇಲಾದ ದೌರ್ಜನ್ಯವನ್ನು ಗಟ್ಟಿಯಾಗಿ ಖಂಡಿಸಿಯೂ ಇಲ್ಲಿ ಬದುಕಬಹುದು ಎಂಬ ಧೈರ್ಯಬಂದರೆ ಇಂಥ ಹತ್ತು ನೂರು ನೋವಿನ ಕಥೆಗಳು ಎದ್ದುಬರಬಹುದು. ಚಿತ್ರರಂಗದ ಆರೋಗ್ಯಕ್ಕೆ ಮಾರಕವಾಗಿರುವ 'ನಿಜವಾದ ತ್ಯಾಜ್ಯ'ಗಳು ತೊಲಗಲೂಬಹುದು.

ಈ ಇಬ್ಬರು ನಟಿಯರ ವಾಪಸಾತಿ ಚಿತ್ರರಂಗದ ಕೆಲವು 'ದೊಡ್ಡಮೀಸೆ' ಜನರಿಗೆ ಸಂಕಟ ಹುಟ್ಟಿಸಿರಬಹುದು. ಹೊಸಕಲೆಂದೇ ನಿಂತ ಕಾಲುಗಳಿಗೆ ಸಣ್ಣಗೆ ನಡುಕ ಹುಟ್ಟಿರಲಿಕ್ಕೂ ಸಾಕು. ಆದರೆ ಸೂಕ್ಷ್ಮ ಸಂವೇದನೆ ಇರುವ, ಮಾನವೀಯ ಕಾಳಜಿ ಇರುವ ಯಾರಿಗಾದರೂ ಇದೊಂದು ಶುಭ ಸೂಚನೆಯಂತೆ ಕಾಣಿಸದೇ ಇರದು. ಯಾಕೆಂದರೆ ಇದು ಆ ಇಬ್ಬರು ನಟಿಯರ ವೃತ್ತಿಬದುಕಿನ ಪುನರಾರಂಭವಷ್ಟೇ ಅಲ್ಲ, ಚಿತ್ರರಂಗದಲ್ಲಿ ಬೀಸುತ್ತಿರುವ ಚೇತೋಹಾರಿ ಬದಲಾವಣೆಯ ಸಣ್ಣ ಸೂಚನೆಯೂ ಇದರಲ್ಲಿದೆ ಅಲ್ಲವೇ? ■